


ಎಡದಿಂದ ಬಲಕ್ಕೆ:

1. ನಿತ್ಯವೂ ಹಗಲು ಕಾಲಿಡುವ ವಿಶೇಷ ಸಮಯ 4
3. ತಾಪತ್ರಯಗಳನ್ನು ಎದುರಿಸುತ್ತಲೇ ಸಾಧಿಸಿದ್ದು ಎಂಥ ಶಕ್ತಿ, ಪರಾಕ್ರಮ! 3
4. ಎಲ್ಲರೂ ಕ್ಷೇಮವಾಗಿರುವಂತೆ ಮಾಡಲು ಆತನಿಗೆ ಭಾರೀ ಸಾಮರ್ಥ್ಯ ಇದೆ 3
6. ಹೊಸ ಹೊಸ ವಿಷಯ ಚರ್ಚಿಸುವವರ ಜೊತೆಗೇ ಒಡನಾಟ 4
7. ವಿರಸವನ್ನು ಹೋಗಲಾಡಿಸಲು ಒಂಬತ್ತು ವಿಧ ಕಾವ್ಯ ರುಚಿ 4
9. ನಾರಿಯರೆಲ್ಲ ತೀರ್ಮಾನಿಸಿರುವಂತೆ ಮನುಷ್ಯರಲ್ಲೆಲ್ಲ ಶ್ರೇಷ್ಠ ಈತ 4
12. ಯುದ್ಧದ ಆವರಣದಲ್ಲಿ ಹೊಸದೇನಲ್ಲ ಈ ಶವ ಭಕ್ಷಕ ಹಕ್ಕಿ 4
14. ಖರ್ಚಿಗೂ ಬೇಡ, ಕುರ್ಚಿಗೂ ಬೇಡ ಇದು ನೆರೆ ದೇಶದ್ದೊಂದು ಶಹರ 3
15. ಮೂರೆಣಿಸುವುದರಲ್ಲಿ ಅವನು ತಲೆಬಾಗುವಂತೆ ಮಾಡು 3
16. ಕೈ ಕೈ ಸೇರಿಸಲು ಬಂದರೆ ದುರುಗುಟ್ಟಿ ನೋಡು 4

ಮೇಲಿಂದ ಕೆಳಕ್ಕೆ:

1. ವ್ಯಾಪಾರವಿಲ್ಲದ ಸಮಯ ಬಂದರೆ ನಿರಶನವೇ ಗತಿ 4
2. ಜಲ ಕ್ಷಾಲನವನ್ನೇ ಅರಿಯದ ನೂರು ಸಾವಿರ ಮನುಷ್ಯರೇ? 4
3. ಪೂರ್ವಾಹ್ಣದ ವೇಳೆಗೇ ಗೋಚರಿಸಿತ್ತು ನದಿಯಲ್ಲಿ ಭಾರೀ ಹರಿವು 3
5. ಪರ್ವತವೆಂದರೇನೆಂದೇ ತಿಳಿಯದ ಬುದ್ಧಿಹೀನ 3
6. ಹೊಸತೇನೋ ಹೌದು. ಆದರೆ ಕಿಂಚಿತ್ತೂ ಸಾರ ಇಲ್ಲ 4
8. ಹಸಿರನ್ನು ಹೊದ್ದು ನಿಂತಿರುವ ಸಸ್ಯಗಳ ಸಾಲೇ ಅವರ ಪ್ರದೇಶದ ಗಡಿ 4
10. ಆ ಕಚೇರಿಯ ಕೆಲಸ ತುಂಬ ಆಸಕ್ತಿದಾಯಕ ಹೌದೇ? 3
11. ಮತ್ತೆ ಎಚ್ಚರಿಕೆ ; ಅದು ಕೇವಲ ಒಂದು ಮಿಥ್ಯಾ ದೃಶ್ಯ 4
12. ಸಮರದಲ್ಲಿ ಗೆದ್ದ ಸುದ್ದಿ ಒಳ್ಳೆಯ ಸಿಹಿ, ಆದರೆ ತಲೆಕೆಳಗು 4
13. ಸಮಸ್ಯೆಯನ್ನು ಬಗೆಹರಿಸುವುದು ಸಾಧ್ಯವಾಗಲೆಂದು ಆಶೀರ್ವದಿಸು 3

---

**27-6-2019 ಉತ್ತರಗಳು**

ಎಡದಿಂದ ಬಲಕ್ಕೆ:

1. ಉಷಃಕಾಲ 3. ಪ್ರತಾಪ 4. ಕ್ಷಮತೆ 6. ಸಹವಾಸ 7. ನವರಸ 9. ನರೋತ್ತಮ 12. ರಣಹದ್ದು 14. ಕರಾಚಿ 15. ಮಣಿಸು 16. ಕೆಕ್ಕರಿಸು

ಮೇಲಿಂದ ಕೆಳಕ್ಕೆ:

1. ಉಪವಾಸ 2. ಲಕ್ಷಜನ 3. ಪ್ರವಾಹ 5. ತೆಪರ 6. ಸತ್ವಹೀನ 8. ಸರಹದ್ದು 10. ರೋಚಕ 11. ಮರೀಚಿಕೆ 12. ರಧುಮಸು (=ಸುಮಧುರ ತಲೆಕೆಳಗು) 13. ಹರಸು

ಪ್ರಶ್ನಾಂಕಣ

# ಪಿಟೀಲು ವಾದಕ ಹಕ್ಕಿ ಇದೆಯೇ?

ಹೌದು, ಇದೆ! ಇಡೀ ಧರೆಯಲ್ಲಿ ಅಂತಹ ಒಂದೇ ಒಂದು ಪ್ರಭೇದದ ಹಕ್ಕಿ ಇದೆ. ಹಾಡುಗಾರ ಹಕ್ಕಿಗಳ ಗುಂಪಿಗೇ (ಚಿತ್ರ 1) ಈ ಹಕ್ಕಿಯೂ ಸೇರಿದೆ. ಆದರೆ ಇತರ ಎಲ್ಲ ಹಾಡುಗಾರರಂತೆ ಈ ಹಕ್ಕಿ ಗಾಯನ ಮಾಡುವುದಿಲ್ಲ; ಸುಶ್ರಾವ್ಯ ಧ್ವನಿ ತೆಗೆದು, ವಿವಿಧ ಸ್ವರಗಳ ಏಳುಬೀಳುಗಳನ್ನು ಬೆಸೆದು, ತನ್ನದೇ ಕೃತಿ ಹಾಡುವುದಿಲ್ಲ. ಬದಲಾಗಿ ನಿಸರ್ಗವೇ ನೀಡಿರುವ ಅತಿ ವಿಶೇಷ ಮೂಳೆ, ಪುಕ್ಕ, ಗರಿಗಳನ್ನು ಬಳಸಿ ಶ್ರುತಿ ಮಾಡಿದ ಪಿಟೀಲಿನ ತಂತಿಗಳ ಮೇಲೆ ಕಮಾನನ್ನು ಹ್ರಸ್ವವಾಗಿ ಎಳೆದಾಗ ಕೇಳಿಸುವಂತಹ ತಾರಸ್ಥಾಯಿಯ ಒಂದೇ ಸ್ವರವನ್ನು ಮತ್ತೆ ಮತ್ತೆ ಹೊರಡಿಸುತ್ತದೆ; ನೇರ ನೋಡಿದರೂ ನಂಬಲಾಗದಂಥ ವಿಸ್ಮಯ ಮೂಡಿಸುತ್ತದೆ!

ಖಗ ಸಾಮ್ರಾಜ್ಯದಲ್ಲಿ 'ಮನಾಕಿನ್' ಹಕ್ಕಿಗಳದೇ (ಚಿತ್ರ 2) ಒಂದು ವಿಶಿಷ್ಟ ಕುಟುಂಬ. ಗುಬ್ಬಚ್ಚಿ ಗಾತ್ರದ, ವರ್ಣಮಯ ಶರೀರದ ಈ ಕುಟುಂಬದಲ್ಲಿ ನಲವತ್ತು ಪ್ರಭೇದಗಳಿವೆ. ಅವೆಲ್ಲ ಪ್ರಭೇದಗಳೂ ಮಧ್ಯ ಅಮೆರಿಕದ ವೃಷ್ಟಿವನಗಳಿಗೆ ಸೀಮಿತವಾಗಿವೆ. ಈ ಕುಟುಂಬದ ಏಕೈಕ ಪ್ರಭೇದ 'ದಿ ಕ್ಲಬ್ ವಿಂಗ್ಡ್ ಮನಾಕಿನ್'ನ (ಚಿತ್ರ 3) ಗಂಡು ಹಕ್ಕಿಗಳಿಗೆ ಮಾತ್ರ ಈ ಪಿಟೀಲು ವಾದನ ಕಲೆ ಮೈಗೂಡಿದೆ. ಕೊಲಂಬಿಯಾ ಮತ್ತು ಈಕ್ವೆಡಾರ್ ದೇಶಗಳ ಮಳೆ ಕಾಡುಗಳಲ್ಲಿ ಮಾತ್ರ ನೆಲೆಸಿರುವ ಈ ಹಕ್ಕಿಗಳು ತಮ್ಮ ಅಸಾಮಾನ್ಯ ಸಂಗೀತ ಸಾಮರ್ಥ್ಯವನ್ನು ಬಳಸುವುದು ಪ್ರಣಯ ಕಾಲದಲ್ಲಿ ಮಾತ್ರ; ಪಿಟೀಲಿನ ಸುಶ್ರಾವ್ಯ ಸ್ವರ ಹೊಮ್ಮಿಸಿ, ಇತರ ಗಂಡುಗಳೊಡನೆ ಸ್ಪರ್ಧಿಸಿ, ಹೆಣ್ಣನ್ನು ಆಕರ್ಷಿಸಿ, ಅದರ ಮನಗೆಲ್ಲುವುದು ಈ ಸಂಗೀತದ ಉದ್ದೇಶ.




ದಿ ಕ್ಲಬ್ ವಿಂಗ್ಡ್ ಮನಾಕಿನ್ ಅನ್ನು ಪಿಟೀಲು ವಾದಕನನ್ನಾಗಿಸಲು ಪ್ರಕೃತಿ ಅದರ ಶರೀರದಲ್ಲಿ ಅನನ್ಯವಾದ, ಪರಮ ಸೋಜಿಗದ ವ್ಯವಸ್ಥೆಯೊಂದನ್ನು ರೂಪಿಸಿದೆ. ಈ ಹಕ್ಕಿಯಲ್ಲಿ ಮಾತ್ರ ಪ್ರತಿ ರೆಕ್ಕೆಯಲ್ಲೂ ಗಟ್ಟಿ ಕೋಲಿನ ಆಕಾರದ ಒಂದೊಂದು ವಿಶೇಷ ಗರಿ ಇದೆ. ಜೊತೆಗೆ, ಇತರೆಲ್ಲ ಹಕ್ಕಿಗಳಲ್ಲಿರುವಂತೆ ಈ ಹಕ್ಕಿಯ ರೆಕ್ಕೆ ಮೂಳೆಗಳು ಟೊಳ್ಳಾಗಿರದೆ ಘನವಾಗಿ ಗಟ್ಟಿಯಾಗಿವೆ; ರೆಕ್ಕೆಗಳ ಸ್ನಾಯುಗಳೂ ವಿಶೇಷವಾಗಿ ಹೆಚ್ಚು ಬಲಿಷ್ಠವಾಗಿವೆ. ಇವೆಲ್ಲದರ ಗುರಿ ಒಂದೇ: ಅವಶ್ಯವಾದಾಗ ಎರಡೂ ರೆಕ್ಕೆಗಳನ್ನು ಬೆನ್ನ ಮೇಲೆ ಎತ್ತಿ ಹಿಡಿದು, ಆಗ ಸಮಾಂತರವಾಗಿ ಎದುರು ಬದುರಾಗುವ ಕೋಲುಗಳಂಥ ಗಟ್ಟಿ ಗರಿಗಳನ್ನು ವೇಗವಾಗಿ ಕುಟ್ಟುವುದು (ಚಿತ್ರ 3ರಲ್ಲಿ ಗಮನಿಸಿ). ಹಾಗೆ ಮಾಡಿದೊಡನೆ ಆ ಎರಡೂ ಗರಿಗಳ ಪುಕ್ಕಗಳು 'ಶ್ರುತಿ ಕವೆ' (ಟ್ಯೂನಿಂಗ್ ಫೋರ್ಕ್)ಯಂತೆ ಕಂಪಿಸುತ್ತವೆ; ಕೂಡಲೇ ತಾರ ಸ್ಥಾಯಿಯ ಪಿಟೀಲಿನ ಸ್ವರ ಹೊಮ್ಮುತ್ತದೆ! ಪ್ರಣಯೋತ್ಸಾಹದಿಂದ ಚಡಪಡಿಸುತ್ತ, ಹೆಣ್ಣೊಂದರ ಸುತ್ತ, ಕೊಂಬೆಯಿಂದ ಕೊಂಬೆಗೆ ನೆಗೆಯುತ್ತ ಗಂಡುಗಳು ನುಡಿಸುವ ಸ್ವರಗಳನ್ನು ಆಲಿಸುವ ಹೆಣ್ಣು ಅತ್ಯುತ್ತಮ ಸಂಗೀತಗಾರನಿಗೆ ಒಲಿಯುತ್ತದೆ!

ಪರಮ ವಿಸ್ಮಯ ಏನೆಂದರೆ, ದಿ ಕ್ಲಬ್ ವಿಂಗ್ಡ್ ಮನಾಕಿನ್ ಹಕ್ಕಿ ತನ್ನ ಕೋಲು ಗರಿಗಳನ್ನು ಪ್ರತಿ ಸೆಕೆಂಡ್‌ಗೆ 107 ಬಾರಿ ತಟ್ಟುತ್ತದೆ! ತತ್ಪರಿಣಾಮವಾಗಿ ಅದರ ಪುಕ್ಕಗಳು ಪ್ರತಿ ಸೆಕೆಂಡ್‌ಗೆ 1500 ಬಾರಿ ಕಂಪಿಸುತ್ತವೆ; ಸ್ವರ ಹೊಮ್ಮಿಸುತ್ತವೆ! ಇಷ್ಟು ವೇಗದ 'ಅಂಗ ಚಲನೆ' ಧರೆಯ ಬೇರಾವ ಜೀವಿಯಲ್ಲೂ ಇಲ್ಲ.

■ ಎನ್. ವಾಸುದೇವ್